೯	ಎಂ. ಆರ್. ವೈದ್ಯ ಮಹಾವಿದ್ಯಾಲಯ, ಗುಲ್ಬರ್ಗಾ	೫೭	೯೩
೧೦	ಆಲ್. ಅಮಿನ್ ವೈದ್ಯ ಮಹಾವಿದ್ಯಾಲಯ, ಬಿಜಾಪುರ	೩೦	೯೦
೧೧	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳ್ಳೂರು	೩೦	೧೨೦
೧೨	ಬಿ ಎಲ್ ಡಿ ಇ ಮಹಾವಿದ್ಯಾಲಯ, ಬಿಜಾಪುರ	—	೧೩೦
೧೩	ಜೆ ಎಸ್ ಎಸ್ ವೈದ್ಯ ಮಹಾವಿದ್ಯಾಲಯ, ಮೈಸೂರು	೩೭	೧೧೩
೧೪	ದೇವರಾಜ ಅರಸ್ ವೈದ್ಯ ಮಹಾವಿದ್ಯಾಲಯ, ಕೋಲಾರ	೨೬	೧೦೪

ಕಳ್ಳಭಟ್ಟಿ ಮದ್ಯದಿಂದ ಮರಣ ಹೊಂದಿರುವ ಬಗ್ಗೆ

೧೪೪೫. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಾಗಿಲು).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೬–೮೭ ಮತ್ತು ೧೯೮೭–೮೮ ನೇ ಸಾಲಿನಲ್ಲಿ ಕಳ್ಳ ಭಟ್ಟಿ ಮದ್ಯವನ್ನು ಕುಡಿದು ಮರಣ ಹೊಂದಿದವರ ಸಂಖ್ಯೆ ಎಷ್ಟು ?

ಆ) ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಕಳ್ಳ ಭಟ್ಟಿಯಲ್ಲಿ ಉತ್ಪಾದನೆ ಮತ್ತು ಮಾರಾಟ ವಿಪರೀತವಾಗಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಇ) ರಾಜ್ಯದಲ್ಲಿ ಇಂತಹ ನ್ಯಾಯ ಬಾಹಿರ ವ್ಯವಹಾರಗಳನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಡಿ. ಬಿ. ಇನಾಂದಾರ್ (ಅಬಕಾರಿ ಸಚಿವರು).—

ಅ) ಸದ್ಯದಲ್ಲಿರುವ ಮಾಹಿತಿಯಂ ಪ್ರಕಾರ ರಾಜ್ಯದಲ್ಲಿ ೧೯೮೬–೮೭ನೇ ಸಾಲಿನಲ್ಲಿ ಯಾರೂ ಮರಣ ಹೊಂದಿರುವುದಿಲ್ಲ, ೧೯೮೭–೮೮ನೇ ಸಾಲಿನಲ್ಲಿ ವಿಷಪೂರಿತ ಮದ್ಯವನ್ನು ಸೇವಿಸಿ ನಾಲ್ಕು ಜನರು ಮರಣ ಹೊಂದಿರುವರೆಂದು ಆಪಾದಿಸಲಾಗಿದೆ.

ಆ) ತಾಲ್ಲೂಕಿನ ಕೆಲವೊಂದು ಪ್ರದೇಶಗಳಲ್ಲಿ ದುರ್ಜನರು ಇಂತಹ ಕೃತ್ಯಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳ ಮೇಲೆ ದಾಳಿ ಮಾಡುವುದೇ ಅಲ್ಲದೆ ಅನುಮಾನಾಸ್ಪದವಾದ ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳಿರುವ ಪ್ರದೇಶಗಳಲ್ಲಿ ನಿಯತವಾಗಿ ಗಸ್ತುಗಳನ್ನು ಏರ್ಪಡಿಸಲಾಗಿದೆ, ಅಬಕಾರಿ ಕಾನೂನನ್ನು ಬಿಗಿ ಗೊಳಿಸಲಾಗಿದೆ.

೨ ಗಮನ ಸೆಳೆಯುವ ಸೂಚನೆಗಳು

೧ ಸುರಪುರ ತಾಲ್ಲೂಕಿನ ದೇವಪ್ಪರದಲ್ಲಿ ಹರಿಜನರ 40 ಮನೆಗಳು ಹಾಗೂ ೨೧ ಗುಡಿಸಲುಗಳು ಪೂರ್ಣವಾಗಿ ಸುಟ್ಟು ಹೋಗಿರುವುದು

ಶ್ರೀಮದನ ಗೋಪಾಲ ನಾಯಕ್ (ಶೋರಾಪುರ).—ಸನ್ಮಾನ್ಯ ಅಧ್ಯಕ್ಷರೇ ಸುರಪುರ ತಾಲ್ಲೂಕಿನ, ದೇವಪ್ಪರದಲ್ಲಿ ಹರಿಜನರ ೪೦ ಮನೆಗಳು ಹಾಗೂ ೨೧ ಗುಡಿಸಲುಗಳು ಪೂರ್ಣವಾಗಿ ಸುಟ್ಟು ಹೋಗಿರುವುದಕ್ಕೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಒದಗಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಬಂಧಿಖಾನೆ ಮತ್ತು ಗೃಹಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.